




## ಪಹಲ್ಗಾಮ್‌ನಲ್ಲಿ ಚೆಲ್ಲಿದ ಪ್ರವಾಸಿಗರ ರಕ್ತ

ಭಾರತವು ಪ್ರಮುಖವಾಗಿ ಎರಡು ಭಯೋತ್ಪಾದನಾ ದಾಳಿಗಳಿಗೆ ಈ ವರ್ಷ ಸಾಕ್ಷಿಯಾಯಿತು.

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನ ಬೈಸರನ್ ಕಣಿವೆ ಪ್ರದೇಶದಲ್ಲಿ ಏಪ್ರಿಲ್ 22ರಂದು ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುತ್ತಿದ್ದ ಪ್ರವಾಸಿಗರ ಮೇಲೆ ಪಾಕಿಸ್ತಾನದ ಮೂವರು ಶಸ್ತ್ರಸಜ್ಜಿತ ಉಗ್ರರು ಹಿಂದೂಗಳನ್ನು ಗುರಿಯಾಗಿಸಿಕೊಂಡು ಮನಸೋ ಇಚ್ಛೆ ಗುಂಡು ಹಾರಿಸಿ ನೇಪಾಳದ ಒಬ್ಬರು ಸೇರಿದಂತೆ 26 ಜನರನ್ನು ಹತ್ಯೆ ಮಾಡಿದರು. ಇವರಲ್ಲಿ 25 ಮಂದಿ ಪ್ರವಾಸಿಗರು. ಒಬ್ಬರು ಸ್ಥಳೀಯರು. ಮಹಿಳೆಯರನ್ನು ಬಿಟ್ಟು, ಪುರುಷರನ್ನೇ ಗುರಿಯಾಗಿಸಿಕೊಂಡು ಭಯೋತ್ಪಾದಕರು ಗುಂಡು ಹಾರಿಸಿದ್ದರು. ಮುಂಬೈನಲ್ಲಿ ನಡೆದ 26/11ರ ನಂತರ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆದಿದ್ದ ದೊಡ್ಡ ದಾಳಿ ಇದು. ರಾಜ್ಯದ ಶಿವಮೊಗ್ಗದ ಉದ್ಯಮಿ ಮಂಜುನಾಥ್ ರಾವ್ ಎಂಬುವರು ಕೂಡ ಈ ಘಟನೆಯಲ್ಲಿ ಪ್ರಾಣ ಕಳೆದುಕೊಂಡಿದ್ದರು.

ಈ ದಾಳಿ ಸಂಘಟಿಸಲು ನೆರವು ನೀಡಿದ್ದ ಇಬ್ಬರು ಸ್ಥಳೀಯರನ್ನು ಬಂಧಿಸಲಾಗಿತ್ತು. ಭಯೋತ್ಪಾದಕರನ್ನು ಪತ್ತೆ ಹಚ್ಚಲು ಭದ್ರತಾ ಪಡೆಗಳು 'ಆಪರೇಷನ್ ಮಹಾದೇವ' ಹೆಸರಿನಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದವು. ಜುಲೈ 28ರಂದು ದಾಳಿ ನಡೆಸಿದವರು ಎನ್ನಲಾದ ಮೂವರು ಉಗ್ರರನ್ನು ಹತ್ಯೆ ಮಾಡಿದ್ದವು. ಪ್ರಕರಣದ ತನಿಖೆ ನಡೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆಯು ಎಂಟು ತಿಂಗಳ ಬಳಿಕ, ಡಿಸೆಂಬರ್ 15ರಂದು ವಿಶೇಷ ನ್ಯಾಯಾಲಯಕ್ಕೆ 1,597 ಪುಟಗಳ ಆರೋಪ ಪಟ್ಟಿ ಸಲ್ಲಿಸಿದೆ.





## ಆಪರೇಷನ್ ಸಿಂಧೂರ, ಮಂಡಿಯೂರಿದ ಪಾಕ್

ಪಹಲ್ಗಾಮ್‌ನಲ್ಲಿ ಪುರುಷ ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ಉಗ್ರರು ನಡೆಸಿದ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನಾ ಪಡೆಗಳು ಪಾಕಿಸ್ತಾನದ ನೆಲದಲ್ಲಿದ್ದ ನಾಲ್ಕು ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿದ್ದ ಐದು ಉಗ್ರರ ನೆಲೆ, ತರಬೇತಿ ಕೇಂದ್ರಗಳನ್ನು ಗುರಿಯಾಗಿಸಿಕೊಂಡು ಮೇ 6ರ ಮುಂಜಾವಿನಲ್ಲಿ ನಡೆಸಿದ ಕಾರ್ಯಾಚರಣೆಗೆ ಇಟ್ಟ ಹೆಸರು 'ಆಪರೇಷನ್ ಸಿಂಧೂರ'. ಲಷ್ಕರ್ ಎ ತೈಯಬಾ, ಜೈಷ್ ಇ–ಮೊಹಮ್ಮದ್ ಭಯೋತ್ಪಾದನಾ ಸಂಘಟನೆಗಳ ಮೂಲಸೌಕರ್ಯಗಳನ್ನು ನಿರ್ನಾಮ ಮಾಡುವ ಉದ್ದೇಶದಿಂದ ನಡೆಸಿದ್ದ ಈ ದಾಳಿಯಲ್ಲಿ ಹಲವು ಭಯೋತ್ಪಾದಕರು ಸತ್ತಿದ್ದರು.

ಇದಕ್ಕೆ ಪ್ರತಿಯಾಗಿ ಪಾಕಿಸ್ತಾನ ಸೇನೆ ಭಾರತದ ಸೇನಾ ನೆಲೆಗಳು ಹಾಗೂ ಜನವಸತಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ವೈಮಾನಿಕ ದಾಳಿ ನಡೆಸಿತು. ಭಾರತದ ವಾಯು ರಕ್ಷಣಾ ವ್ಯವಸ್ಥೆಯು ಎಲ್ಲ ದಾಳಿಗಳನ್ನೂ ಸಮರ್ಥವಾಗಿ ಎದುರಿಸಿತು. ಮೇ 7, 8, 9 ಮತ್ತು 10ರವರೆಗೆ ಎರಡೂ ರಾಷ್ಟ್ರಗಳ ನಡುವೆ ನಡೆದ ಸೇನಾ ಸಂಘರ್ಷವು ಭಾರತದ ಸೇನಾ ಸಾಮರ್ಥ್ಯವನ್ನು ಜಗಜ್ಜಾಹೀರು ಮಾಡಿತು. ಈ ಸಂಘರ್ಷದಲ್ಲಿ ಭಾರತ ಬ್ರಹ್ಮೋಸ್ ಕ್ಷಿಪಣಿಯನ್ನು ಬಳಸಿತು. ಪಾಕಿಸ್ತಾನದ ವಾಯುಪಡೆಯ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಭಾರತ ನಡೆಸಿದ ದಾಳಿಯು ಪಾಕ್‌ಗೆ ಭಾರಿ ಪ್ರಮಾಣದಲ್ಲಿ ಹಾನಿ ಉಂಟು ಮಾಡಿತು. ಮೇ 10ರಂದು ದಿಢೀರ್ ಆಗಿ ಕದನ ವಿರಾಮ ಏರ್ಪಟ್ಟಿತು. ಪಾಕಿಸ್ತಾನದ ಸೇನೆಯು ಭಾರತದ ಸೇನೆಯನ್ನು ಸಂಪರ್ಕಿಸಿ ಕದನವಿರಾಮದ ಪ್ರಸ್ತಾಪ ಮಾಡಿತು ಎಂದು ಕೇಂದ್ರ ಸರ್ಕಾರ ನಂತರ ಹೇಳಿತು. ಆದರೆ ವ್ಯಾಪಾರ ಒಪ್ಪಂದವನ್ನು ಮುಂದಿಟ್ಟುಕೊಂಡು ಈ ಯುದ್ಧವನ್ನು ನಿಲ್ಲಿಸಿದ್ದು ತಾನು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡರು. ಭಾರತ ಇದನ್ನು ನಿರಾಕರಿಸಿತು.

## ಜುಬೀನ್; ದಿಢೀರ್ ಕಣ್ಮರೆ



ಅಸ್ಸಾಂನ ಖ್ಯಾತ ಗಾಯಕ ಜುಬೀನ್ ಗರ್ಗ್ ಅವರು ಸಿಂಗಪುರಕ್ಕೆ ಹೋಗಿದ್ದಾಗ ಸೆಪ್ಟೆಂಬರ್ 19ರಂದು ಅನುಮಾನಾಸ್ಪದವಾಗಿ ಮೃತಪಟ್ಟರು. ನೀರಿನಲ್ಲಿ ಈಜುವುದಕ್ಕೆ ಹೋದಾಗ ಮೃತಪಟ್ಟಿದ್ದಾರೆ ಎಂದು ವರದಿಯಾಗಿತ್ತು. ಅಸ್ಸಾಂ ಸರ್ಕಾರ ಪ್ರಕರಣದ ಬಗ್ಗೆ ತನಿಖೆ ನಡೆಸಿ, ಅದು ಕೊಲೆ ಎಂದು ಹೇಳಿದೆ. ಹಿಂದಿಯ 'ಯಾ ಅಲಿ...' ಹಾಡಿನ ಮೂಲಕ ಜನಮನ ಸೆಳೆದಿದ್ದ ಗರ್ಗ್ ಅವರು ಅಸ್ಸಾಂನಲ್ಲಿ ರಾಜಕೀಯವಾಗಿಯೂ ದೊಡ್ಡ ಹೆಸರು ಗಳಿಸಿದ್ದರು. 52ನೇ ವಯಸ್ಸಿನಲ್ಲಿ ಅವರು ದಿಢೀರ್ ಆಗಿ ನಿಧನರಾಗಿದ್ದು ಅವರ ಲಕ್ಷಾಂತರ ಅಭಿಮಾನಿಗಳನ್ನು ಆಘಾತಕ್ಕೆ ಕೆಡವಿತ್ತು.